**ಸಾಕ್ಷಿಯನ್ನು ದಿನಾಂಕಃ 13-08-2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ಶ್ರೀ ಎಸ್.ಕೆ.ಯು, ಎದುರುದಾರರ ಪರ ವಕೀಲರಿಂದಃ**

5. ಸರ್ವೇ ನಂ. 34/14ಎ3 ನಮ್ಮ ತಂದೆಯವರಿಗೆ ಮಾರಾಟ ಮಾಡಿದ ಮಾರಾಟಗಾರರ ಸರ್ವೇ ನಂಬರಾಗಿತ್ತು. ಈ ಪ್ರಕರಣದ ಎದುರುದಾರರಿಗೆ ಸರ್ವೇ ನಂ. 34/14ಎ2 ಬಂದಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಮತ್ತು ನಿಮ್ಮ ತಂದೆಯವರಿಗೆ ಮಾರಾಟ ಮಾಡಿದ ಮಾರಾಟಗಾರನಿಗೆ ಪ್ರಾಪ್ತವಾದ ಆಸ್ತಿಗಳು ಭೂನ್ಯಾಯ ಮಂಡಳಿಯ ಒಂದೇ ಆದೇಶದಲ್ಲಿ ಪ್ರಾಪ್ತವಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಆಸ್ತಿ ಬಂದಿದ್ದಕ್ಕೂ ಮತ್ತು ನಿಮಗೆ ಮಾರಾಟ ಮಾಡಿದವರಿಗೆ ನಕ್ಷೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ಥಳಕ್ಕೆ ನಕ್ಷೆ ಇದೆಯೋ ಇಲ್ಲವೊ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

6. ನಮ್ಮ ಆಸ್ತಿಯ ಉತ್ತರ ಮತ್ತು ದಕ್ಷಿಣಕ್ಕೆ ಡಾಂಬಾರು ರಸ್ತೆ ಇರುತ್ತದೆ. ನಮ್ಮ ಆಸ್ತಿಯ ಪೂರ್ವ ಮತ್ತು ಪಶ್ಚಿಮದಲ್ಲಿ ನಮ್ಮದೇ ಆಸ್ತಿಗಳು ಇರುತ್ತದೆ, ಆದರೆ ನನಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ. ನಮ್ಮ ಆಸ್ತಿಯ 4 ದಿಕ್ಕುಗಳಲ್ಲಿ ಯಾರ ಯಾರ ಆಸ್ತಿಗಳು ಇರುತ್ತದೆ ಎಂದು ನನ್ನಿಂದ ಹೇಳಲು ಸಾಧ್ಯವಿಲ್ಲ. ನಿಮ್ಮ ಆಸ್ತಿಯ ಸುತ್ತಲೂ ನೀವು ಕಾಂಪೌಂಡ್ ಗೋಡೆ ಕಟ್ಟಿದ್ದು ಇದಯೋ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ, ಪ್ರತಿವಾದಿಗಳು ನಮ್ಮ ತಂತಿ ಬೇಲಿಯನ್ನು ತೆಗೆದು ಕಾಂಪೌಂಡ್ ಗೋಡೆಯನ್ನು ಕಟ್ಟಿರುತ್ತಾರೆ. ನಾವು ಆಸ್ತಿಯನ್ನು ಖರೀದಿಸಿದ ನಂತರ ತಂತಿ ಬೇಲಿಯನ್ನು ಹಾಕಿರುತ್ತೇವೆ. ನೀವು ಆಸ್ತಿಯನ್ನು ಖರೀದಿಸುವ ಕಾಲಕ್ಕೆ ಆಸ್ತಿಯನ್ನು ಅಳತೆ ಮಾಡಿ ಗಡಿ

ಗುರುತಿಸಿಕೊಂಡಿರುತ್ತೀರೋ ಎಂಬ ಪ್ರಶ್ನೆಗೆ ಸಾಕ್ಷಿ ಗುರುತಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಿಸಿ ದಾಖಲಾತಿಗಳನ್ನು ಹಾಜರು ಪಡಿಸಲು ಸಾಧ್ಯವಿಲ್ಲ.

7. ನಿಮ್ಮ ಪ್ರಕಾರ ಮೊದಲ ಬಾರಿಗೆ ಪ್ರತಿವಾದಿಗಳು ಯಾವಾಗ ತಂತಿ ಬೇಲಿಯನ್ನು ಕಿತ್ತು ಹಾಕಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು 2013 ರ ಪೂರ್ವದಲ್ಲಿ ಕಿತ್ತು ಹಾಕಿರುತ್ತಾರೆ. ಆದರೆ ಯಾವ ತಾರೀಖಿನಂದು ಎಂದು ನನಗೆ ನೆನಪಿಲ್ಲ. ನಿಮ್ಮ ಪ್ರಕಾರ ನೀವು ಈಗ ಹೇಳಿದಂತೆ ಮೊದಲು ಮತ್ತು ಕೊನೆಯ ಬಾರಿಗೆ ಅವರು ತಂತಿ ಬೇಲಿಯನ್ನು ಕಿತ್ತು ಹಾಕಿರುತ್ತಾರೋ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ನಾವು ಮತ್ತೊಮ್ಮೆ ತಂತಿಬೇಲಿಯನ್ನು ಹಾಕಿದಾಗಲೂ ಅವರು ಕಿತ್ತು ಹಾಕಿರುತ್ತಾರೆ. 2013 ನೇ ಸಾಲಿನ ಪೂರ್ವದಲ್ಲಿ ನೀವು ತಂತಿಬೇಲಿಯನ್ನು ಕಿತ್ತು ಹಾಕಲಾಯಿತು ಎಂದು ಹೇಳಿದ್ದು, ಅದರ ನಂತರ ಯಾವ ತಿಂಗಳು ಮತ್ತು ಯಾವ ವರ್ಷ ತಂತಿಬೇಲಿಯನ್ನು ಮತ್ತೊಮ್ಮೆ ನಾಟಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನೀವು ಹಾಗೆ 2013 ರ ಎಷ್ಟು ಸಮಯದ ನಂತರ ಮತ್ತೊಮ್ಮೆ ತಂತಿಬೇಲಿಯನ್ನು ಹಾಕಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಬಳಿ ಅದಕ್ಕೆ ಸಂಬಂಧಿಸಿ ದಾಖಲಾತಿಗಳು ಇರುತ್ತದೆ ನಾನು ದೂರು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರರು ನೀವು ಹೇಳಿದಂತೆ ತಂತಿಬೇಲಿಯನ್ನು 2 ನೇ ಬಾರಿ ನಾಟಿದ ಎಷ್ಟು ಸಮಯದ ನಂತರ ಅವರು ಕಿತ್ತು ಹಾಕಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಎದುರುದಾರು ಹಾಗೆ ಕಿತ್ತು ಹಾಕಿದ ಬಗ್ಗೆ ನಾನು ದೂರು ದಾಖಲಿಸಿರುತ್ತೇನೆ , ಆದರೆ ಯಾವಾಗ ಎಂದು ನನಗೆ ನೆನಪಿಲ್ಲ. ಅದಕ್ಕೆ ಸಂಬಂಧಿಸಿ ನನ್ನ ಬಳಿ ದಾಖಲಾತಿಗಳು ಇರುತ್ತದೆ ಅದನ್ನು ಹಾಜರು ಪಡಿಸಬಲ್ಲೆ.

8 .ಈ ಅರ್ಜಿಯನ್ನು ನೀವು ಯಾವ ಕಾರಣಕ್ಕೆ ಹಾಕಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನ್ಯಾಯಾಲಯದಿಂದ ತಾತ್ಕಾಲಿಕ ಮನಾಯಿ ಆಜ್ಞೆ ಇದ್ದಾಗ ನಾನು ತಂತಿಬೇಲಿಗೆ ದಾವೆಯ ಬಗ್ಗೆ ಬೋರ್ಡ್ ಹಾಕಿದ್ದನ್ನು ಅದನ್ನೆಲಾ ಎದುರುದಾಾರು ಕಿತ್ತು ಹಾಕಿದ್ದರಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ. ತಾತ್ಕಾಲಿಕ ಮನಾಯಿ ಆಜ್ಞೆ ಆದ ಎಷ್ಟು ಸಮಯದ ನಂತರ ಪ್ರತಿವಾದಿಗಳು ನೀವು ಹೇಳಿದಂತೆ ಬೋರ್ಡ ನ್ನು ಮತ್ತು ಬೇಲಿಯನ್ನು ಕಿತ್ತು ಹಾಕಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಈಗ ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ. ಈ ಅರ್ಜಿಯಲ್ಲಿ ನೀವು ಯಾವ ದಿನಾಂಕದಂದು ಹಾಗೆ ಎದುರುದಾರರು ಬೇಲಿಯನ್ನು ಕಿತ್ತು ಹಾಕಿದ ಬಗ್ಗೆ ದಿನಾಂಕವನ್ನು ನಮೂದಿಸಿರುತ್ತೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಿನಾಂಕದಂದು ಬೇಲಿಯನ್ನು ಕಿತ್ತು ಹಾಕಿದಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ ಮತ್ತು ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ. ನಮ್ಮ ಆಸ್ತಿಗೆ ಬೇಲಿ ಹಾಕಿದಕ್ಕೆ ಸಂಬಂಧಿಸಿ ನಾನು ನ್ಯಾಯಾಲಯಕ್ಕೆ ಫೋಟೋಗಳನ್ನು ಹಾಜರು ಪಡಿಸಿರುತ್ತೇನೆ.

9. ನೀವು ಪೊಲೀಸ್ ಠಾಣೆಯಲ್ಲಿ ಅಳತೆ ಕಾಮಗಾರಿಗಳನ್ನು ಕೈಗೊಳ್ಳುತೇವೆ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ಇರುವ ಸಹಿ ನಿಮ್ಮದಾಗಿರುತ್ತದೆಯೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಿಡಿ-1 ಎಂದು, ಸಾಕ್ಷಿಯ ಸಹಿಯನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ಇರುವ ಸಹಿ ನಿಮ್ಮದಾಗಿರುತ್ತದೆಯೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಿಡಿ-2 ಎಂದು, ಸಾಕ್ಷಿಯ ಸಹಿಯನ್ನು ನಿಡಿ-2(ಎ) ಎಂದು ಗುರುತಿಸಲಾಯಿತು.

10. ಪ್ರತಿವಾದಿಗಳು ಮೊದಲಿನಿಂದಲೂ ನೀವು ಹೇಳಿದಂತಹ 10 ಸೆಂಟ್ಸ್ ಜಾಗ ಅವರಿಗೆ ಸೇರಿದ ಸ್ಥಳವಾಗಿರುತ್ತದೆ ಎಂದು ಹೇಳುತ್ತಲೇ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ತಂದೆಯವರು ಖರೀದಿಸಿರುತ್ತಾರೆ ಎಂದು ಹೇಳಿದ ಆಸ್ತಿಯು ಸರ್ವೇ ನಂ. 34/14 ಎ3 ರ ಒಳಗೆಯೇ ಬರಬೇಕೇ ಹೊರತು ಅದರ ಗಡಿಯನ್ನು ಬಿಟ್ಟು ಹೊರಗೆ ಬರುವಂತೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನೀವು ಸಲ್ಲಿಸಿದ ದಾವೆಯಲ್ಲಿ ಭೂನ್ಯಾಯ ಮಂಡಳಿಯವರು ನೀಡಿದ ನಕ್ಷೆಯನ್ನು ನಿಪಿ-19 ಎಂದು ನೀವು ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-19 ರಲ್ಲಿ ನಿಮ್ಮ ಮತ್ತು ಪ್ರತಿವಾದಿಯರ ಆಸ್ತಿಯನ್ನು ನಿಖರವಾಗಿ ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನೀವು ಅಸಲು ದಾವಾ ಸಂಖ್ಯೆ 77/2013 ರಲ್ಲಿ ಸಾಕ್ಷಿನುಡಿದಿರುತ್ತೀರೋ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ನಾನು ಸಾಕ್ಷಿ ನುಡಿದಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಅಸಲು ದಾವಾ ಸಂಖ್ಯೆ 77/2013 ರ ನಿಪಿ-19 ನ್ನು ತೋರಿಸಿ ಪ್ರತಿವಾದಿ ಪರ ವಕೀಲರು ಈ ನಕ್ಷೆಯನ್ನು ನೀವು ಅಸಲು ದಾವಾ ಸಂಖ್ಯೆ 77/2013 ಯಲ್ಲಿ ಹಾಜರು ಪಡಿಸಿರುತ್ತೀರಿ ಎಂದು ಹೇಳಿದಕ್ಕೆ ಸಾಕ್ಷಿ ದಾಖಲಾತಿಯನ್ನು ನೋಡಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

11. ನಿಶಾಂತ್ ಭಂಡಾರಿ ಮತ್ತು ಪ್ರತಿಮಾ ಭಂಡಾರಿ ಯಾರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರ ವಿರುದ್ಧ ನಾನು ಪೊಲೀಸ್ ಠಾಣೇಯಲ್ಲಿ ಯಾವುದೇ ದೂರನ್ನು ಮತ್ತು ಹೇಳಿಕೆಯನ್ನು ನೀಡಿರುವುದಿಲ್ಲ. ನೀವು ಹೇಳುವಂತಹ ನಿಮ್ಮ ತಂದೆಯ ತಂದೆಯವರು ಖರೀದಿಸಿದಂತೆ ಆಸ್ತಿಯು ನೀವು ಹೇಳಿದಂತಹ ಸ್ಥಳದಲ್ಲಿ ಇರುವುದೇ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಮತ್ತು ಪ್ರತಿವಾದಿಗಳ ನಡುವ ಇರುವ ತಕರಾರನ್ನು ಸರಿ ಪಡಿಸಿಕೊಳ್ಳುವ ಸಲುವಾಗಿ ನೀವೇನಾದರೂ

ಸರ್ವೆ ಮಾಡಲು ಪ್ರಯತ್ನಿಸಿರುತ್ತೀರೋ ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿಯು ಸರ್ವೇ ಮಾಡಲು ಒಪ್ಪುವುದೇ ಇಲ್ಲ ಹಾಗೂ ಒಳಗೆ ಹೋಗಲು ಬಿಡುವುದೇ ಇಲ್ಲ ಎಂದು ನುಡಿಯುತ್ತಾರೆ. ನೀವು ನ್ಯಾಯಾಲಯದ ಮುಖಾಂತರ ಸರ್ವೇ ಮಾಡಿಸಲು ಪ್ರಯತ್ನ ಪಟ್ಟಿದ್ದು ಇದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯ ನಾನು ಪ್ರಯತ್ನ ಪಟ್ಟಿರುತ್ತೇನೆ ಮತ್ತು ಅದಕ್ಕೆ ಸಂಬಂಧಿಸಿ ದಾಖಲಾತಿಯನ್ನು ಹಾಜರು ಪಡಿಸಬಹುದು. ನೀವು ಸರ್ವೇ ಸೂಪರ್ ವೈಸರ್ ನ ಎದುರು ತಕರಾರು ಸಲ್ಲಿಸಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿ ತಕರಾರು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಅದನ್ನು ನಿಮಗೆ ಹಾಜರು ಪಡಿಸಬಹುದೇ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಮೊದಲು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-1 ರಿಂದ 5 ದಾಖಲಾತಿಗಳನ್ನು ತೋರಿಸಿ ಸದರಿ ತಕರಾರು ನೀವು ಹಾಜರ ಪಡಿಸಿದ ದಾಖಲಾತಿಗಳಲ್ಲಿ ಇರುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೋಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಅರ್ಜಿಯನ್ನು ಯಾವಾಗ ಸಲ್ಲಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ಈ ಪ್ರಕರಣದ ಎದುರುದಾರರು ಸರ್ವೇ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿದಾಗ ನೀವು ಅದಕ್ಕೆ ತಕರಾರು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ನಾನು ತಕರಾರು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದು ಹೇಳಿದ್ದು, ಸದರಿ ತಕರಾರು ಯಾವ ಸಂದರ್ಭದಲ್ಲಿ ಸಲ್ಲಿಸಿರುತ್ತೀರಿ ಎಂಬ ಪ್ರಶ್ನೆಗೆಸ ಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

12. ದಿಃ 21-12-2018 ರಂದು ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನಾಂಕ ನೀವು ತಕರಾರು ಆಗಿರುತ್ತದೆ ಎಂದು ದೂರು ದಾಖಲಿಸಿರುತ್ತೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ದೂರು ದಾಖಲಿಸಿರುತ್ತೇನೆ , ಆದರೆ ನನಗೆ

ದಿನಾಂಕ ನೆನಪಿರುವುದಿಲ್ಲ. ಸರ್ವೇ ನಂ. 34/14 ಎ2 ಪ್ರತಿವಾದಿಗೆ ಸೇರಿದ ಆಸ್ತಿಯಾಗಿರುತ್ತದೆ ಮತ್ತು ಅದರಲ್ಲಿ ನಿಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನೀವು ಹೇಳಿದಂತಹ ನಿಮ್ಮ ಆಸ್ತಿಗೆ ಯಾವತ್ತೂ ಕೂಡ ತಕರಾರು ಮಾಡಿರುವುದಿಲ್ಲ ಮತ್ತು ನಿಮ್ಮ ಅನುಭವಕ್ಕೆ ತೊಂದರೆ ಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಅವರಿಗೆ ಸಂಬಂಧಪಟ್ಟ ಆಸ್ತಿಯನ್ನು ಅವರು ಕಾಂಪೌಂಡ್ ಗೋಡೆಯನ್ನು ಕಟ್ಟಿಕೊಂಡು ಅನುಭವಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನೀವು ಹೇಳುವಂತಹ ಸ್ಥಳದಲ್ಲಿ ನಿಮ್ಮ ಆಸ್ತಿಯಲ್ಲಿ ನೀವು ಸಾಧಿಸುವ ಸ್ಥಳವು ವಾಸ್ತವಾಗಿ ಸದರಿ ಜಾಗದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ನಿಮ್ಮ ಜಾಗವನ್ನು ಗುರುತಿಸಿಕೊಳ್ಳಲು ಸಾಧ್ಯವಾಗದೇ ಇರುವುದರಿಂದ ಪ್ರತಿವಾದಿಗಳ ಆಸ್ತಿಯನ್ನು ನೀವು ನಿಮ್ಮ ಆಸ್ತಿ ಎಂದು ವಾದಿಸುತ್ತಿದ್ದೀರಿ ಎಂದರೆ ಸರಿಯಲ್ಲ. ಅದರ ಮುಂದುವರಿದ ಭಾಗವಾಗಿ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಬರೆಯಲು ನಾನು ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

13. ಪೊಲೀಸರು ನೀವು ಕೊಟ್ಟಂತ ದೂರಿಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅವರ ಮೇಲಾಧಿಕಾರಿಗಳಿಗೆ ದೂರು ದಾಖಲಿಸಿದ್ದು ಇದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಅದನ್ನು ಹಾಜರು ಪಡಿಸಬಹುದು ಎಂದು ನುಡಿಯುತ್ತಾರೆ. ಸದರಿ ದೂರಿಗೆ ಅನುಗುಣವಾಗಿ ಏನು ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಬಹುದೇ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಅವರ ಆಸ್ತಿಯನ್ನು ಅನುಭವಿಸಬಾರದು ಎಂಬ ಉದ್ದೇಶವನ್ನು ಇಟ್ಟುಕೊಂಡು ನೀವು ಅವರ ವಿರುದ್ಧ ಸುಳ್ಳು ದೂರುಗಳನ್ನು ದಾಖಲಿಸುವ ಮತ್ತು ಸುಳ್ಳು ದಾವೆಗಳನ್ನು ಒಡ್ಡುವ ಹವ್ಯಾಸವನ್ನು ಇಟ್ಟುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಪೊಲೀಸರ ಮುಂದೆ

ನೀವು ನೀಡಿದ ದೂರಿಗೆ ನಿಮ್ಮಿಬ್ಬರನ್ನು ಕರೆಸಿ ಸ್ಥಳವನ್ನು ಅಳತೆ ಮಾಡಿಕೊಳ್ಳಿ ಎಂದು ನಿಮ್ಮಿಬ್ಬರಲ್ಲಿ ಹೇಳಿದಾಗ ನೀವು ಅದಕ್ಕೆ ತಕರಾರು ಒಡ್ಡಿರುತ್ತೀರಿ ಎಂದರೆ ಸಾಕ್ಷಿಯು ಎಫ್.ಎಂ.ಬಿ ನಕ್ಷೆಯಂತೆ ಸರ್ವೇ ಮಾಡಿ ಎಂದು ಕೇಳಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಾಗೇ ಕೇಳಿಕೊಂಡಿದ್ದಕ್ಕೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ಪ್ರತಿವಾದಿಗಳು ವಿವಾದಿತ ಆಸ್ತಿಯನ್ನು ಅಳತೆ ಮಾಡಬೇಕು ಎಂದು ಸರ್ವೇ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿದಕ್ಕೆ ಪೊಲೀಸರು ನಿಮ್ಮನ್ನು ಮತ್ತು ಅವರನ್ನು ಠಾಣೆಗೆ ಕರೆಸಿದ್ದರು ಎಂದರೆ ಸಾಕ್ಷಿ ಹೌದು ಎಂದುಎ ನುಡಿಯುತ್ತಾರೆ. ಆಗ ನಿಮ್ಮಿಬ್ಬರಿಗೂ ಕೂಡ ಸ್ಥಳವನ್ನು ಅಳತೆ ಮಾಡಿ ನಿಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದರಂತೆ ಸರ್ವೇ ಇಲಾಖೆಯವರು ಸ್ಥಳಕ್ಕೆ ಬಂದು ಅಳತ ಮಾಡಿ ನಕ್ಷೆ ತಯಾರಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಹಾಗೆ ಸರ್ವೇ ಮಾಡಲು ಬಂದಾಗ ನೀವು ತಕರಾರು ಸಲ್ಲಿಸಿ ಒಂದು ಆಕ್ಷೇಪ ವ್ಯಕ್ತಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ನೀವು ಆ ಸಂದರ್ಭದಲ್ಲಿ ಸರ್ವೇ ಇಲಾಖೆಗೆ ನೀಡಿದ ಆಕ್ಷೇಪ ಪತ್ರವಾಗಿರುತ್ತದೆ ಎಂದರೆ ಸಾಕ್ಷಿಯು ಅದನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಿಡಿ-3 ಎಂದು ಗುರುತಿಸಲಾಯಿತು. ನೀವು ಹೇಳಿದಂತೆ ಪ್ರತಿವಾದಿಗಳು ಯಾವತ್ತೂ ಕೂಡ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಪ್ರತಿವಾದಿಗಳ ವಿರುದ್ಧ ಒಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಆದ್ದರಿಂದ ನೀವು ಕೇಳಿದಂತಹ ಯಾವುದೇ ನಿವೃತ್ತಿಗೆ ಅರ್ಹರಲ್ಲ ಎಂದರೆ ಸರಿಯಲ್ಲ. ಸತ್ಯಾಂಶವನ್ನು ನೀವು ಹೇಳಬೇಕಾಗುತ್ತದೆ ಎನ್ನುವ ಕಾರಣದಿಂದ ನೀವು ಕೇಳಿದಂತಹ ಎಲ್ಲಾ ಪ್ರಶ್ನೆಗೆಳಿಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತೀರಿ ಎಂದರೆ ಸರಿಯಲ್ಲ.

**(ಮರುವಿಚಾರಣೆ ಇಲ್ಲ.)**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ